


**ಸೈಬರ್ ವಂಚನೆ ಕುರಿತು ಜಾಗೃತಿ ಮೂಡಿಸಬೇಕಾದ ಪೊಲೀಸರೇ ಇಂಥ ವಂಚಕರ ಜಾಲಕ್ಕೆ ಬಲಿಯಾಗುತ್ತಿದ್ದಾರೆ. ಸಾಮಾನ್ಯರ ಸ್ಥಿತಿ ಇನ್ನೂ ಶೋಚನೀಯವಾಗಿದೆ. ಸೈಬರ್ ಅಪರಾಧ ಪತ್ತೆಗೆ ರಾಜ್ಯದಲ್ಲಿ ಇದುವರೆಗೆ 45 ಸಾವಿರ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ತನಿಖಾ ವ್ಯವಸ್ಥೆಯ ಬಲವರ್ಧನೆಗೆ ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಪ್ರಾಸಿಕ್ಯೂಟರ್‌ಗಳಿಗೆ ಸಿಸಿಐಟಿಆರ್ ಮೂಲಕ ಹೆಚ್ಚಿನ ತರಬೇತಿಗೆ ವ್ಯವಸ್ಥೆಯಾಗಿದೆ. ಕಳೆದ ವರ್ಷ ₹182.8 ಕೋಟಿ ಹಣವನ್ನು ಅಪರಾಧಿಗಳು ಲಪಟಾಯಿಸಿದ್ದಾರೆ. ಈ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ 65 ಸಾವಿರ ಅಪರಾಧ ಪ್ರಕರಣಗಳು ವರದಿಯಾಗಿವೆ.**

**- ನಾಗೇಶ ಹೆಗಡೆ,** ಲೇಖಕ



ಸುಧಾ ಮೂರ್ತಿ ಅವರನ್ನು ಡಿಜಿಟಲ್ ಅರೆಸ್ಟ್‌ಗೆ ಒಳಪಡಿಸುವ ಯತ್ನವೂ ನಡೆದಿತ್ತು. ಇದಷ್ಟೇ ಅಲ್ಲ, ಡಿಜಿಟಲ್ ಅರೆಸ್ಟ್ ಎಂಬುದು ಹಲವು ರೀತಿಯ ಸೈಬರ್ ಅಪರಾಧಗಳಲ್ಲೊಂದು. ಆದರೆ ಇದು ಸೃಷ್ಟಿಸಿರುವ ಆತಂಕವೂ ದೊಡ್ಡದು.

ಇವೆಲ್ಲವೂ ಕರ್ನಾಟಕದ್ದಾದರೆ, ಗುರುಗ್ರಾಮದ ಅಂಜಲಿ ಎಂಬುವವರನ್ನು ಸಿಬಿಐ ಅಧಿಕಾರಿ ಎಂದು ಹೇಳಿಕೊಂಡು ವಿಡಿಯೊ ಕರೆ ಮಾಡಿದ ವ್ಯಕ್ತಿ ₹5.85 ಕೋಟಿ ದೋಚಿದ್ದ. ಮುಂಬೈನ ನಿವೃತ್ತ ಬ್ಯಾಂಕ್ ಉದ್ಯೋಗಿಯೊಬ್ಬರು ಮೂರು ದಿನ 'ಡಿಜಿಟಲ್ ಅರೆಸ್ಟ್'ಗೆ ಒಳಗಾಗಿ ₹50 ಲಕ್ಷ ಕಳೆದುಕೊಂಡಿದ್ದಾರೆ. ಮುಂಬೈನ ಉದ್ಯಮಿಯೊಬ್ಬರು 'ವರ್ಚುವಲ್ ನ್ಯಾಯಾಲಯ' ಹೆಸರಿನಲ್ಲಿ ₹58 ಕೋಟಿ ಕಳೆದುಕೊಂಡಿದ್ದಾರೆ. ಇಂದೋರ್‌ನ ವೈದ್ಯರೊಬ್ಬರು ಹೂಡಿಕೆಗೆ ಸಂಬಂಧಿಸಿದ ಪರಿಶೀಲನೆ ಸ್ಕ್ಯಾಮ್‌ನಲ್ಲಿ ₹3.5 ಕೋಟಿ ಕಳೆದುಕೊಂಡ ಪ್ರಕರಣಗಳು ಕೆಲವು ಮಾತ್ರ.

2022ರಿಂದ 2025ರ ಅವಧಿಯಲ್ಲಿ ಈ ವಂಚನೆಯ ವ್ಯಾಪ್ತಿ ₹2,580 ಕೋಟಿ ಎಂದರೆ ಇದರ ಆಳ ಮತ್ತು ಅಗಲವನ್ನು ಊಹಿಸಬಹುದು. ಇದರಲ್ಲಿ ಬೆಂಗಳೂರಿನಲ್ಲಿ ನಡೆದ ವಂಚನೆಯ ಪ್ರಮಾಣ ಶೇ 26ರಷ್ಟು, ಹೈದರಾಬಾದ್‌ನಲ್ಲಿ ಶೇ 20 ಹಾಗೂ ದೆಹಲಿ–ಎನ್‌ಸಿಆರ್‌ನಲ್ಲಿ ಶೇ 18ರಷ್ಟು ಪ್ರಕರಣಗಳು ದಾಖಲಾಗಿವೆ.

ಸರ್ಕಾರಿ ದಾಖಲೆಗಳ ಪ್ರಕಾರ 2022ರಲ್ಲಿ 39,925 ಪ್ರಕರಣಗಳು ದಾಖಲಾಗಿದ್ದರೆ, 2024ರಲ್ಲಿ ಇದು 1.23 ಲಕ್ಷಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ವರದಿಯಲ್ಲಿ ಹೇಳಲಾಗಿದೆ.

ವೃದ್ಧರೇ ಹೆಚ್ಚಾಗಿ ತುತ್ತಾಗುತ್ತಿರುವ ಈ ಹಗರಣದ ವ್ಯಾಪ್ತಿಯನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ಎಲ್ಲಾ ರಾಜ್ಯಗಳು ತಮ್ಮಲ್ಲಿರುವ ಡಿಜಿಟಲ್ ಅರೆಸ್ಟ್ ಪ್ರಕರಣಗಳನ್ನು ಸಿಬಿಐಗೆ ಹಸ್ತಾಂತರಿಸುವಂತೆ ನಿರ್ದೇಶನ ನೀಡಿದೆ. ಈ ಪೀಡೆಯನ್ನು ಬೇರು ಸಹಿತ ಕಿತ್ತುಹಾಕಲು ಅಗತ್ಯವಿರುವ ಸಾಧನ, ಮಾನವ ಸಂಪನ್ಮೂಲ, ತಂತ್ರಜ್ಞರ ನೆರವು ಏನು ಬೇಕಾದರೂ ಕೇಳಿ, ಕೊಡಿಸಲು ಸಿದ್ಧ ಎಂದಿರುವುದನ್ನು ಗಮನಿಸಿದರೂ ಈ ಅಪರಾಧ ಎಷ್ಟು ಆಳಕ್ಕಿಳಿದಿದೆ ಎಂಬುದನ್ನು ಊಹಿಸಬಹುದು.

ಹಾಗೆಂದು ಅಧಿಕಾರಿಗಳೇನು ಕೈಕಟ್ಟಿ ಕುಳಿತಿಲ್ಲ. ವಾಟ್ಸ್‌ಆ್ಯಪ್ ಮತ್ತು ಸ್ಕೈಪ್ ತಂತ್ರಾಂಶ ಬಳಸಿ ಕೃತ್ಯ ಎಸಗಿದವರನ್ನು ಅಥವಾ ಕೃತ್ಯಕ್ಕೆ ಬಳಸಿದ್ದಾರೆ ಎನ್ನಲಾದ ಲಕ್ಷಾಂತರ ಸಿಮ್ ಕಾರ್ಡ್‌ಗಳು, ಸಾವಿರಾರು ಐಎಂಇಐ ಸಂಖ್ಯೆಗಳನ್ನು ರದ್ದುಪಡಿಸಿದ್ದಾರೆ. ಹೀಗಿದ್ದರೂ ಡಿಜಿಟಲ್ ಅರೆಸ್ಟ್ ಅಲ್ಲಲ್ಲಿ ವರದಿಯಾಗುತ್ತಲೇ ಇದೆ. ಭಾರತದಾಚೆ ಕುಳಿತು, ಇಲ್ಲಿನವರನ್ನೇ ಬಂಧಿಸುವ ದೊಡ್ಡ ಜಾಲವೇ ಬೆಳೆದು ನಿಂತಿರುವುದು ಪೊಲೀಸ್, ಸಿಬಿಐ, ಸರ್ಕಾರ ಹಾಗೂ ಸುಪ್ರೀಂ ಕೋರ್ಟ್ ಅನ್ನೇ ನಿದ್ದೆಗೆಡಿಸಿದೆ.

## ಡಿಜಿಟಲ್ ಅರೆಸ್ಟ್ ನಿಗ್ರಹಕ್ಕೆ ಇರುವ ಕಾನೂನು ಅಸ್ತ್ರಗಳು

ಭಾರತದಲ್ಲಿರುವ ಹೊಸ ಕಾನೂನು ಚೌಕಟ್ಟಾದ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ಅಡಿಯಲ್ಲಿ 'ಡಿಜಿಟಲ್ ಅರೆಸ್ಟ್' ಎಂಬುದನ್ನು ವಂಚನೆ, ಸೈಬರ್ ಬೆದರಿಕೆ ಹಾಗೂ ಆರ್ಥಿಕ ಸುಲಿಗೆಯ ಅಪರಾಧ ಎಂದೆನ್ನಲಾಗಿದೆ.

2025ರ ಆರಂಭದಲ್ಲಿ ಮೊದಲೆರೆಡು ತಿಂಗಳಲ್ಲೇ 17 ಸಾವಿರ ಡಿಜಿಟಲ್ ಅರೆಸ್ಟ್ ಪ್ರಕರಣಗಳು ನಡೆದಿರುವುದಕ್ಕೆ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ. ಈ ಕುರಿತು ಕೇಂದ್ರ, ಸಿಬಿಐ ಮತ್ತು ರಾಜ್ಯಗಳಿಂದ ಮಾಹಿತಿ ಕೇಳಿದೆ.

ಇದೇ ಹೊತ್ತಿಗೆ ಕೇಂದ್ರ ಗೃಹ ಇಲಾಖೆಯು ಡಿಜಿಟಲ್ ಪೊಲೀಸ್ ಪೋರ್ಟಲ್ ಮೂಲಕ ಸೈಬರ್ ಅಪರಾಧಗಳ ಮೇಲೆ ನಿಗಾ ವಹಿಸಿದೆ. ಕೃತಕ ಬುದ್ಧಿಮತ್ತೆಯನ್ನೂ ಬಳಸಿ ಅಪಾಯವನ್ನು ಪತ್ತೆ ಮಾಡುವ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹದ್ದಿನ ಕಣ್ಣಿಟ್ಟಿದೆ. ಹಲವು ಗುಪ್ತಚರ ಇಲಾಖೆಗಳ ನೆರವನ್ನೂ ಪಡೆದಿದೆ ಎಂದು ವರದಿಯಾಗಿದೆ.

ಹೀಗಿದ್ದರೂ, ವಂಚಕರು ನೆಲದಡಿಯಲ್ಲಿ ನುಸುಳಿ ಅಪರಾಧ ಕೃತ್ಯಗಳನ್ನು ನಡೆಸುತ್ತಿರುವುದು ಮತ್ತು ಡಿಜಿಟಲ್ ಅರೆಸ್ಟ್ ಈಗಲೂ